ಈ ವಿಷಯದಲ್ಲಿ ನಿಮ್ಮನ್ನು ರಿಪೇರಿ ಮಾಡಲು ಯಾರಿಂದಲೂ ಸಾಧ್ಯವಿಲ್ಲ, ಎಂದೇ ಆಪಾದಿಸುತ್ತಾರೆ ನಿಮ್ಮ ಬಹುಕಾಲದ ಗೆಳೆಯ ಈಶ್ವರಯ್ಯ. ಕಡು ಬಡತನದ ಬಾಲ್ಯ ಮತ್ತು ಅನೇಕ ಕಷ್ಟ ಕಾರ್ಪಣ್ಯಗಳ ನಡುವೆಯೂ ನೀವು ಈ ಹಾಸ್ಯ ಪ್ರಜ್ಞೆಯನ್ನು ಹೇಗೆ ಉಳಿಸಿಕೊಳ್ಳುತ್ತೀರಿ?

ಮುಂಬಯಿಯ ಚಿಲ್ಲರೆ ಕಳ್ಳರು ಅಂದರೆ 'ಪಿಕ್ ಪಾಕೆಟ್‌ಗಳು' ಅದ್ಭುತ ಕಲೆಗಾರರು. ಅವರೇ ಪಾಕೀಟು ಎಗರಿಸಿ, "ಚೋರ್ ಚೋರ್" (ಕಳ್ಳ ಕಳ್ಳ) ಎಂದು ಬೊಬ್ಬೆ ಹೊಡೆದು, ಜನಸಂದಣಿ ಸೇರಿಸುತ್ತಾರೆ. ಈ ಮಧ್ಯೆ ಎಗರಿಸಿದ ಪಾಕೀಟು ಅವನ ಸ್ನೇಹಿತನ ಕೈ ಸೇರುತ್ತದೆ. ನಿಜವಾದ ಕಳ್ಳ ಪಿಕ್ ಪಾಕೆಟ್‌ಗೆ ಗುರಿಯಾದ ವ್ಯಕ್ತಿಗೆ ಸಾಂತ್ವನ ನೀಡುತ್ತಿರುತ್ತಾನೆ. ನೆರೆದ ಜನಜಂಗುಳಿ ಜಾಗ್ರತೆಯಾಗಿ ಇರಬೇಕೆಂದು ಲೊಚಗುಟ್ಟಿ ಕರಗಿ ಹೋಗುತ್ತದೆ. ಭಯಂಕರ ಜಾಗರೂಕತೆಯಿಂದ ಇದ್ದಾಗಲೂ ನನ್ನ ಪಾಕೀಟನ್ನು ನನಗೆ ಕಿಂಚಿತ್ತೂ ಅರಿವಾಗದಂತೆ ಸೆಳೆದುಕೊಂಡ ಆ ಚಾಕಚಕ್ಯತೆಗೆ ನಾನು ಭೇಷ್ ಎನ್ನದೆ ನಿರ್ವಾಹವಿಲ್ಲ. ಇದನ್ನು ವಿವರಿಸಿದ ರೀತಿ, ನೀವು ಅಂದಂತೆ, ಸ್ವಲ್ಪ ವಿನೋದದ್ದು.

ಹಾಸ್ಯಪ್ರಜ್ಞೆ ನನಗೆ ಹುಟ್ಟಿನಿಂದ ಬಂದ ಬಳುವಳಿ. ಇದನ್ನು ನನ್ನ ಕಾದಂಬರಿಗಳಲ್ಲಿ ಹರಿಬಿಟ್ಟಿದ್ದೇನೆ. ನನ್ನ ಹೊರ ವ್ಯಕ್ತಿತ್ವ ಗಾಂಭೀರ್ಯದ್ದಾದರೂ ತಿಳಿಹಾಸ್ಯದಿಂದ ನಾನೂ ಉಲ್ಲಸಿತನಾಗಿ ಉಳಿದವರನ್ನೂ ಅರಳಿಸಲು ಯತ್ನಿಸುತ್ತೇನೆ. ಇದಕ್ಕೆ ಈಶ್ವರಯ್ಯ ಸ್ವಲ್ಪ ಹೆಚ್ಚು ತಾರೀಫು ಮಾಡಿದ್ದಾರೆ, ಅಷ್ಟೇ.

ಕಷ್ಟ ಕಾರ್ಪಣ್ಯದ ಜೀವನ ನಗುವಿಗೆ ತಡೆಯಾಗಬೇಕೆಂದಿಲ್ಲವಲ್ಲ?

- ಕತೆ ಅಥವಾ ಕಾದಂಬರಿಯನ್ನು ಬರೆಯುವಾಗ ನಿಮ್ಮ ಪಾಲಿಗೆ ಆರಂಭದ ಬಿಂದು ಯಾವುದು? ಆ ಪ್ರಕ್ರಿಯೆಯನ್ನು ಕೊಂಚ ವಿವರಿಸುವಿರಾ?

ನನ್ನ ಕತೆಯಾಗಲೀ ಕಾದಂಬರಿಯಾಗಲೀ ಮೊದಲು ಮಸಕು ಮಸಕಾಗಿ ನನ್ನ ಚಿತ್ತ ಭಿತ್ತಿಯಲ್ಲಿ ಮೂಡಿದ ಬಳಿಕ ಒಂದಿಷ್ಟು ಸಮಯ **incubate** ಆಗುತ್ತದೆ. ಬಳಿಕ ಬರೆಯಲು ನನ್ನನ್ನು ಜಗ್ಗುತ್ತದೆ. ಬಡಪೆಟ್ಟಿಗೆ ಈ ಜಗ್ಗುವಿಕೆಗೆ ಸೋಲದ ನಾನು ಪೂರ್ತಿ ಕತೆ ಯಾ ಕಾದಂಬರಿ ಸ್ಪಷ್ಟವಾಗಿ ತನ್ನ ಮೈದೆರೆದುಕೊಂಡಾಗ ಬರೆಯಲು ಆರಂಭಿಸುತ್ತೇನೆ.

- ಸುಮಾರು 27–28ವರ್ಷಗಳ ನಂತರವೂ 'ಚಾಮುಂಡೇಶ್ವರಿ ಭವನ'ದ ವಿವರಗಳನ್ನು ಸ್ಮರಿಸಿಕೊಂಡು ಹಿಗ್ಗುವ ಓದುಗರ ದಂಡೇ ಇದೆ. ದಶಕಗಳ ಹಿಂದಿನ ದಕ್ಷಿಣ ಕನ್ನಡ ಹಾಗೂ ಸುತ್ತಮುತ್ತಲಿನ ಜೀವನ ಮತ್ತು ಸಂಸ್ಕೃತಿಯ ಅನೇಕ ಸ್ತರಗಳನ್ನು ಅನನ್ಯವಾಗಿ ಕಟ್ಟಿಕೊಟ್ಟಿದ್ದೀರಿ. ಇಂದಿನ ಕಾಲದ ಪಲ್ಲಟಗಳನ್ನು ಕಥಾ ಸಾಹಿತ್ಯದಲ್ಲಿ ಬಿಂಬಿಸಬೇಕು ಅನಿಸುತ್ತದೆಯೇ?

'ಚಾಮುಂಡೇಶ್ವರಿ ಭವನ' ಕಾದಂಬರಿಯನ್ನು ಜನ ಮೆಚ್ಚಿದ್ದು ನಿಜ. ಪ್ರತಿಗಳು ಸಿಗದಿದ್ದಾಗ ಅದು ಮೂರನೇ ಮುದ್ರಣ ಕಂಡಿತು.

ನಾನು ನನ್ನ ಪರಿಸರದಲ್ಲಿ ಕಂಡುಕೊಂಡ ಹಳ್ಳಿಯ ಚಿತ್ರಣಕ್ಕೆ ಒತ್ತು ಕೊಟ್ಟಿದ್ದೇನೆ. ಆ ಕಾಲಘಟ್ಟದಲ್ಲಿ ಪುಟ್ಟ ಊರಾದ ಕೆಮ್ಮಣ್ಣಿಗೆ ಬಸ್ಸು ಬರುವುದೂ ಅದ್ಭುತ ಕುತೂಹಲದ ವಿಷಯ. ಸಣ್ಣ ಊರು ನಾಗರಿಕತೆಗೆ ಮೆಲ್ಲಗೆ ತೆರೆದುಕೊಂಡು ವಿವಿಧ ಸ್ತರದ ಬದಲಾವಣೆಗಳು ಘಟಿಸುವುದನ್ನು ಅಲ್ಲಿ ಚಿತ್ರಿಸಿದ್ದೇನೆ. ಊರಿನ ಘಮ ಇನ್ನೂ ಉಳಿದುಕೊಂಡಿದೆ. ಆದರೆ ಸಾಮಾಜಿಕ ಪಲ್ಲಟಗಳನ್ನು ನಾನು ಕಂಡರಿಯದೆ ಕಲ್ಪಿಸುವುದು ನನ್ನಿಂದಾಗದು.

- ಸಾಮಾನ್ಯರಿಗೆ ಮರೆತೇ ಹೋಗಿರುವ ಅಥವಾ ಇತ್ತೀಚೆಗೆ ವಿರಳವಾಗಿ ಕೇಳಸಿಗುವ